**<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>**

Spl.C. 204-2024

ದೋ.ಸಾ. 1
ಫ್ರಾ.ಸಾ. 1
ಪ್ರ.ವ.ಬೊ.ದಿನಾಂಕ. 23-07-2026

| | | |
|---|---|---|
| ಹೆಸರು | - | ವೆಂಕಟೇಶ್ ಎನ್ |
| ತಂದೆ ಹೆಸರು | - | ನಿಂಗಪ್ಪ |
| ವಯಸ್ಸು | - | 36 ವರ್ಷ |
| ಉದ್ಯೋಗ | - | ಕೂಲಿಕೆಲಸ |
| ವಾಸ ಸ್ಥಳ | - | ಸಾರಥಿ ಹೊಸೂರು |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ಚಾ.ಸಾ.4 ನನ್ನ ಹೆಂಡತಿ. ನಾವು ಬೋವಿ ಜನಾಂಗದವರು. ಅದು ಪರಿಶಿಷ್ಟ ಜಾತಿಗೆ ಸೇರುತ್ತದೆ. ನನಗೆ ಚಾ.ಸಾ.5 ಮತ್ತು 6 ರ ಪರಿಚಯ ಇರುತ್ತದೆ. ಆರೋಪಿಯ ಪರಿಚಯ ಇದೆ. ಅವನು ನಮ್ಮ ಊರಿನವನೇ ಆಗಿದ್ದು, ಅವನು ಲಿಂಗಾಯತ ಸಮುದಾಯಕ್ಕೆ ಸೇರಿದವನು.

2. ನನ್ನ ಮದುವೆಯಾಗಿ ಸುಮಾರು 9 ವರ್ಷಗಳಾಗಿದೆ. ಇಬ್ಬರು ಮಕ್ಕಳಿರುತ್ತಾರೆ. ನಾನು ನನ್ನ ಸಂಸಾರದೊಂದಿಗೆ ಸಾರಥಿ ಹೊಸೂರು ಗ್ರಾಮದಲ್ಲಿ ವಾಸವಾಗಿರುತ್ತೇವೆ. ಆರೋಪಿ ಸಹ ಅದೇ ಗ್ರಾಮದಲ್ಲಿ ವಾಸವಾಗಿರುತ್ತಾನೆ. 2020-21 ರಲ್ಲಿ ಆರೋಪಿಯು ನನ್ನ ಹೆಂಡತಿಗೆ ಬೆಳಿಗ್ಗೆ ಹಾಗೂ ಅಪರಾತ್ರಿಗಳಲ್ಲಿ ಫೋನ್ ಮಾಡುತ್ತಿದ್ದ. ಆತ ಮಧ್ಯರಾತ್ರಿಯಿಂದ ಬೆಳಗಿನವರೆಗೂ ಫೋನ್ ಮಾಡಿ ಹಿಂಸಿಸುತ್ತಿದ್ದ. ಆರೋಪಿ ಹಾಗೂ ನನ್ನ ಹೆಂಡತಿಯದು ಅಕ್ರಮ ಸಂಬಂಧ ಇತ್ತು.

3. 19-03-2024 ರಂದು ನನ್ನ ಹೆಂಡತಿ ಕಾವ್ಯ ತನ್ನ ತಾಯಿಗೆ ಹುಷಾರಿಲ್ಲ ಎಂದು ಹೇಳಿ ಅಶೋಕ ನಗರ ಭದ್ರಾವತಿ ತಾಲ್ಲೂಕು ಅವರ ತವರು ಮನೆಗೆ ಹೋದಳು. ನಾನು ಅವಳಿಗೆ ವಾಪಾಸ್ ಬರಲು ಫೋನ್ ಮಾಡಿದಾಗ ಬರಿ ಬ್ಯುಸಿ ಟೋನ್ ಬರುತ್ತ ಇತ್ತು. ದಿಃ 15-03-2024 ರಂದು ನನ್ನ ಹೆಂಡತಿಯ ಬರ್ತಡೇ ಇತ್ತು. ದಿಃ 10-05-2024 ರಂದು ಸಾಮಾಜಿಕ ಜಾಲ ತಾಣದಲ್ಲಿ ಹಾಗೂ ನನ್ನ ಮೊಬೈಲ್ ಗೆ ಫೋಟೋಗಳು ಬಂದವು. ಅದರಲ್ಲಿ ಆರೋಪಿ ಮತ್ತು ನನ್ನ ಹೆಂಡತಿ ಒಬ್ಬರಿಗೊಬ್ಬರು ಮುತ್ತು ಕೊಡುವುದು ಬಂದಿತು. ಕೇಕ್ ತಿನ್ನಿಸುವುದು ಮುಂತಾದ ಫೋಟೋಗಳು ಬಂದವು. ಆ ಫೋಟೋಗಳನ್ನು ನೋಡಿ ನನಗೆ ಆತ್ಮಹತ್ಯೆ ಮಾಡಿಕೊಳ್ಳೋಣ ಎನ್ನಿಸಿತು.

4. ದಿಃ 10-05-2024 ರಂದು ಭದ್ರಾ ಚಾನಲ್ ನಿಂದ ನೀರು ತರಲು ಬೆಳಿಗ್ಗೆ 10-30 ಗೆ ನಾನು ಹೋಗಿದ್ದೆನು. ಆಗ ಅಲ್ಲಿ ಆರೋಪಿ ರಾಕೇಶ್ ಸಹ ಇದ್ದ. ಅದೇ ದಿನ ಸಂಜೆ 4-00 ರಿಂದ 4-30 ಗೆ ನೀರು ತರಲು ಮತ್ತೆ ಅಲ್ಲಿಗೆ ಹೋಗಿದ್ದೆನು. ಆಗ ಸಹ ಆರೋಪಿ ಅಲ್ಲೆ ಇದ್ದನು. ನೀನು ಸಾಮಾಜಿಕ ಜಾಲತಾಣದಲ್ಲಿ ಪೋಟೋಗಳನ್ನು ಯಾಕೆ ಹಾಕಿದ್ದೀಯಾ ಎಂದು ಕೇಳಿದಾಗ ಆರೋಪಿಯು ವಡ್ಡ ಸೂಳೇಮಗ ಎಂದು ಬೈದು, ನನಗೆ ಎದೆಯ ಮೇಲೆ, ಕೈಕಾಲುಗಳಿಂದ ಹೊಡೆದನು ಹಾಗೂ ಜೀವದ ಬೆದರಿಕೆ ಹಾಕಿದನು. ತನ್ನ ಹತ್ತಿರ ಜನ ಇದ್ದಾರೆ ಎಂದು ಹೇಳಿದನು. ಆತನು ಕಲ್ಲಿನಿಂದ ನನ್ನ ಎದೆಗೆ ಗುದ್ದಿದನು. ಕಂಪ್ಲೆಂಟ್ ಕೊಟ್ಟರೆ ಕೊಲೆ ಮಾಡುತ್ತೇನೆ ಎಂದು ಹೇಳಿದನು. ಅಲ್ಲಿ ಚಾ.ಸಾ.5 ಮತ್ತು 6 ಇದ್ದರು. ಅವರು ಸಹ ನೀರು ತುಂಬಿಕೊಳ್ಳಲು ಬಂದಿದ್ದರು. ಅವರು ಜಗಳ ಬಿಡಿಸಿ ನನ್ನನ್ನು ಚನ್ನಗಿರಿ ಸರ್ಕಾರಿ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿದರು. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಈಗ ನೋಡುತ್ತಿರುವ ಕಂಪ್ಲೆಂಟ್ ಅನ್ನು ಕೊಟ್ಟಿರುತ್ತೇನೆ. ಸದರಿ ಕಂಪ್ಲೆಂಟ್ ಅನ್ನು ನಾನು ನೋಡುತ್ತಿದ್ದು, ಅದನ್ನು ನಿ.ಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

5. ನಂತರ ಪೋಲೀಸರು ಚಾ.ಸಾ.2 ಮತ್ತು 3 ಇವರ ಸಮಕ್ಷಮ ಘಟನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿದರು. ಸದರಿ ಪಂಚನಾಮೆಗೆ ನನ್ನ ಸಹಿ ಇದ್ದು, ಆ ಪಂಚನಾಮೆಯನ್ನು ನಿ.ಪಿ.2 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಗಲಾಟೆಯಾದ ಸ್ಥಳವನ್ನು ನಾನೇ ಪೋಲೀಸರಿಗೆ ತೋರಿಸಿರುತ್ತೇನೆ. ಈಗ ನೋಡುತ್ತಿರುವ ಎರಡು ಪೋಟೋಗಳನ್ನು ಸ್ಥಳದಲ್ಲಿ ತೆಗೆದಿದ್ದು, ಆ ಎರಡು ಪೋಟೋಗಳನ್ನು ಒಟ್ಟಾರೆ ನಿ.ಪಿ.3 ಎಂದು ಗುರುತಿಸಲಾಯಿತು.  ನಾನು ಸಾಮಾಜಿಕ ಜಾಲ ತಾಣದಲ್ಲಿ ಬಂದ ಪೋಟೋಗಳನ್ನು ಒಂದು ಸ್ಟುಡೀಯೋದಲ್ಲಿ ಸಿಡಿಯಲ್ಲಿ ಹಾಕಿಸಿ ಅವುಗಳ ಪ್ರಿಂಟ್ ಹಾಕಿಸಿದೆನು. ಅವುಗಳನ್ನು ಪೊಲೀಸ್ ಠಾಣೆಗೆ ಕೊಟ್ಟು ಬಂದೆನು.

6. ಈಗ ನೋಡುತ್ತಿರುವ ಒಂಭತ್ತು ಪೋಟೋಗಳು ನಾನು ಆ ದಿನ ಪ್ರಿಂಟ್ ಹಾಕಿಸಿದ ಪೋಟೋಗಳಾಗಿರುತ್ತವೆ. ಅವುಗಳನ್ನು ಒಟ್ಟಾರೆ ನಿ.ಪಿ.4 ಎಂದು ಗುರುತಿಸಲಾಯಿತು.  ಅದರೊಂದಿಗೆ ಮೂಲ ಪೋಟೋಗಳು ಇರುವ ಸಿಡಿಯನ್ನು ಹಾಜರುಮಾಡಿದ್ದು, ಆ ಸಿಡಿಯನ್ನು ನಿ.ಪಿ.5 ಎಂದು ಗುರುತಿಸಲಾಯಿತು.  ಸಾಕ್ಷಿಯು ನವೀನ ಬಿನ್ ರವಿನಾಯಕ್ ಎಂಬುವವನ ಕುಮ್ಮಕ್ಕಿನಿಂದ ಜಾಲತಾಣದಲ್ಲಿ ಹಾಕಲಾಗಿದೆ. ಅವನೇ ಪೋಟೋಗಳನ್ನು ಮತ್ತು ವೀಡಿಯೋವನ್ನು ಮಾಡಿರುತ್ತಾನೆ. ಆ ನವೀನ ನಮ್ಮ ಊರಿನವನೇ ಅನ್ನುತ್ತಾನೆ. ಅವನ ತಾತನ ಹೆಸರು ನಾನ್ಯಾನಾಯಕ್. ನವೀನನಿಗೆ 23 ವರ್ಷ ವಯಸ್ಸಾಗಿದೆ. ಆತನಿಗೆ ಅಡಿಕೆ ತೋಟ ಇದೆ. ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಎಸ್ ವಕೀಲರಿಂದ.**

ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಾಕ್ಷಿಗೆ 1000/- ರೂಪಾಯಿ ಖರ್ಚಿನ ಮೇರೆಗೆ ಪಾಟೀಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ . ಹೇ. ಕೇ. ಸರಿಯಾಗಿದೆ.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.